(SRI S. R. NAGAPPA SETTY.)

(*b*) whether there is any representation from the above villagers for the construction of a "Kenehalla Reservoir" across Kenehalla in Shimoga Taluk;

(*c*) whether it is a fact that water is wasted and there is a possibility for a reservoir?

A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) No.

(*c*) This has to be examined in detail.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—ಈ ಕಡ್ಲೆ ಒಡ್ಡು ಬ್ರೀಚ್ ಆದಮೇಲೆ ನುತ್ತಮುತ್ತ ಹಳ್ಳಿಯಲ್ಲಿರತಕ್ಕ ಪ್ರಜಾಸಂಖ್ಯೆ ಕಮ್ಮಿಯಾಗಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಶಿವಮೊಗ್ಗಾ ಹತ್ತಿರ ಇದೆ. ಅನೇಕರು ಶಿವಮೊಗ್ಗಾಕ್ಕೆ ಬಂದು ನೆಲಸಿದ್ದಾರೆ.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—ಅಲ್ಲಿನ ಪ್ರಜೆಗಳು ಕಾಂಟ್ರಿಬ್ಯೂಷ್ ಹಣ ಕೊಡುತ್ತೇವೆ ಎಂದು ಮುಚ್ಚಳಿಕೆಯನ್ನು 10-15 ವರ್ಷಗಳಿಂದ ಬರೆದು ಕೊಡುತ್ತಾ ಇದ್ದಾರೆ ಅಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—10-15 ವರ್ಷಗಳಿಂದ ಬರೆದುಕೊಡುತ್ತಿರುವುದು ಗೊತ್ತಿಲ್ಲ. ಒಂದೆರಡು ಸಾರಿ ಬರೆದುಕೊಟ್ಟಿದ್ದಾರೆ. ಅನಂತರ ಕಾರಣಾಂತರದಿಂದ ಆ ಪ್ರಾಜೆಕ್ಟನ್ನು ತೆಗೆದುಕೊಳ್ಳಲಿಲ್ಲ. ಎರಡು ವರ್ಷಗಳ ಕೆಳಗೆ ಆ ಪ್ರಾಜೆಕ್ಟು ಸರ್ಕಾರದವರ ಪರಿಶೀಲನೆಗೆ ಬಂದಿತ್ತು. ಆಗ ಅವರಿಂದ ಎಷ್ಟು ಪ್ರಯೋಜನವಾಗುತ್ತದೆ ಎಂಬುದನ್ನು ಕಂಡುಹಿಡಿಯುವ ಬಗ್ಗೆ ಗೇಜಿಂಗ್ ಕಂಡುಹಿಡಿಯಬೇಕೆಂದು ಆಯಿತು. ಎರಡು ವರ್ಷಕಾಲ ಅದರಲ್ಲಿ ನೀರು ಎಷ್ಟು ಶೇಖರವಾಗುತ್ತದೆ ಎಂಬುದನ್ನು ಕಂಡುಹಿಡಿದು ಅನಂತರ ತೆಗೆದುಕೊಳ್ಳಬೇಕು ಎಂದು ಆಗಿತ್ತು. ಅಂತಿಮ ತೀರ್ಮಾನವನ್ನು ಸದ್ಯದಲ್ಲೇ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—ಕಾಗೆ ಹಳ್ಳದಲ್ಲಿ ಬೇಸಿಗೆಯಲ್ಲೂ ನೀರು ಹರಿಯುತ್ತದೆ ಎಂಬುದು ಗೊತ್ತಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಇನ್ನೂ ತನಿಖೆ ಮಾಡಿಲ್ಲ.

Well Subsidy for Bagepalli and Gudibanda Taluks.

Q.—287. **Sri B. V. NARAYANA REDDY** (Bagepalli-Gudibanda).—

Will the Government be pleased to state;—

(*a*) the money allotted for well subsidy for Bagepalli and Gudibanda Taluks in 1954-55 (figures to be given separately);

(*b*) the amount spent;

(*c*) if there is a lapse of amount, the reasons therefor?

A.—**Sri Kadidal MANJAPPA** (Minister for Revenue and Public Works).—

(*a*)	*Bagepalli*	*Gudibanda*
	Rs. 5,000	Rs. 1,000

(*b*) Rs. 3,825. No amount has been spent so far.

(*c*) Does not arise as the budget year has not yet closed.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಈ ಎರಡು ತಾಲ್ಲೂಕುಗಳಿಂದ ಬಂದ ಅರ್ಜಿಗಳು ಎಷ್ಟು ಎಂಬುದನ್ನು ಹೇಳುತ್ತೀರಾ?

Sri Kadidal MANJAPPA.—Sorry, I have not got that information.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಈಗ ಒಂದು ತಾಲ್ಲೂಕಿನಲ್ಲಿ 3,825 ರೂಪಾಯಿ ಖರ್ಚಾಗಿದೆ, ಇನ್ನೊಂದು ತಾಲ್ಲೂಕಿನಲ್ಲಿ ಏನೂ ಖರ್ಚಾಗಿಲ್ಲ ಎಂದು ಹೇಳಿರುತ್ತೀರಿ. ಹಾಗಿದ್ದರೆ ಇನ್ನೊಂದು ತಾಲ್ಲೂಕಿನಿಂದ ಅರ್ಜಿಗಳು ಯಾವುದೂ ಬಂದೇ ಇಲ್ಲ ಎಂದು ತಿಳಿದುಕೊಂಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿರಬೇಕು. ಈ ಸಂದರ್ಭದಲ್ಲಿ ಹೇಳುವುದಾದರೆ ಕೆಲವು ತಾಲ್ಲೂಕುಗಳಲ್ಲಿ ಸಬ್‌ಸಿಡಿ ಮೊಬಲಗು ಕೊಟ್ಟಷ್ಟನ್ನೂ ಖರ್ಚು ಮಾಡಿಲ್ಲ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಮಾಡಿಲ್ಲದೇ ಇರಬಹುದು. ಅಪ್ಲಿಕೇಷ್ ಬಂದೂ ಕೂಡ ಗ್ರಾಂಟ್ ಮಾಡಿರುವ ಮೊಬಲಗನ್ನು ಕೊಡದೇ ಇರುವುದಕ್ಕೆ ಕಾರಣವೇನು?

ಶ್ರೀ ಕಡಿದಾಳ್ ಮಂಜಪ್ಪ.—ಇದರಲ್ಲಿ ತಪ್ಪಿದೆ; ವಿಚಾರಿಸುತ್ತೇನೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಈ ರೀತಿ ತಪ್ಪು ತಪ್ಪು ಉತ್ತರಗಳನ್ನು ಇಂಥ ದೊಡ್ಡ ಸಭೆಯಲ್ಲಿ ಬರುವ ಪ್ರಶ್ನೆಗಳಿಗೆ ಕೊಡುವವರಿಗೆ ಏನು ಶಿಕ್ಷೆ ಮಾಡುತ್ತೀರಿ ಎಂಬುದನ್ನು ಹೇಳುತ್ತೀರಾ?

Sri Kadidal MANJAPPA.—Complete information has not been furnished. Therefore, I assure the Hon'ble Member that I am going to enquire into the matter.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ತಾವು ಮಂಜೂರು ಮಾಡಿರುವ ಮೊಬಲಗನ್ನು ಸಂದಾಯಮಾಡಿ, ಆ ಕೆಲಸ ಕಾರ್ಯಗಳನ್ನು ಕಾರ್ಯರೂಪಕ್ಕೆ ತರಲು ಯೋಚನೆ ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಈ ಸಾರಿ ಮಾಡಬೇಕೆಂದು ಇದ್ದೇವೆ.